# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **821 (1014)** |
| **ಸದಸ್ಯರ ಹೆಸರು** | : | **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **15.12.2025** |
| **ಉತ್ತರಿಸುವ ಸಚಿವರು** | : | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಪ್ರೌಢ ಶಾಲೆಗಳಲ್ಲಿ NATIONAL SKILL QUALITY FRAME WORK (NSQF) ಯೋಜನೆ ಅಡಿ ಸಮಗ್ರ ಶಿಕ್ಷಣ ಕರ್ನಾಟಕದಿಂದ ಎನ್‌ಜಿಓ ಗಳಿಗೆ ಅನುದಾನ ಪಾವತಿಸಿ NSQF ಗಳ ಮೂಲಕ ವೇತನ ಪಡೆಯುವ ಶಿಕ್ಷಕರಿಗೆ ನೀಡುವ ಸಂಬಳ ಅಥವಾ ಗೌರವ ಧನ ಎಷ್ಟು? | N S Q F ಯೋಜನೆ ಅಡಿಯಲ್ಲಿ ಎನ್ ಜಿ ಓ ಗಳ ಮೂಲಕ ನೇಮಕವಾಗಿರುವ ವೃತ್ತಿ ಶಿಕ್ಷಕರಿಗೆ ಸಮಗ್ರ ಶಿಕ್ಷಣ ಕರ್ನಾಟಕದಿಂದ ನಿಗದಿಪಡಿಸಿದ ದರದ ಪ್ರಕಾರ ಗೌರವಧನ ಪಾವತಿಸಲಾಗುತ್ತದೆ.<br>9 ಮತ್ತು 10 ನೇ ತರಗತಿ ಬೋಧಿಸುತ್ತಿರುವ ವೃತ್ತಿ ತರಬೇತುದಾರರಿಗೆ ರೂ.22,000/- ಮಾಸಿಕ ಗೌರವಧನ ಪಾವತಿಸಲಾಗುತ್ತಿದೆ. |
| ಆ | ಸರ್ಕಾರಿ ಶಾಲೆಗಳಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುವ ಅತಿಥಿ ಶಿಕ್ಷಕರಿಗೆ ನೀಡುವ ಸಂಬಳ ಅಥವಾ ಗೌರವ ಧನ ಎಷ್ಟು ಸರ್ಕಾರವು ವೇತನ ತಾರತಮ್ಯ ಅನುಸರಿಸುತ್ತಿದೆಯೇ; ಈ ಕುರಿತು ಸರ್ಕಾರದ ಕ್ರಮ ಏನು? | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ಪಾವತಿಸುವ ಗೌರವ ಧನ ರೂ 12,000/- ಮತ್ತು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ಪಾವತಿಸುವ ಗೌರವ ಧನ ರೂ 12,500/- ಆಗಿರುತ್ತದೆ.<br>ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ವೇತನ ಒಂದೇ ಆಗಿರುತ್ತದೆ. |
| ಇ | ವೇತನ ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಒಂದಾದ ಸಮಾನತೆಯನ್ನು ಇದು ಉಲ್ಲಂಘಿಸಿದಂತಾಗುವುದಿಲ್ಲವೇ; | |
| ಈ | ಸಮಾನ ಕೆಲಸಕ್ಕೆ ಸಮಾನ ವೇತನ ಯಾಕಿಲ್ಲ; NSQF ಶಿಕ್ಷಕರು ಕೇವಲ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿನಿಯರಿಗೆ ಪಾಠ ಮಾಡಿದರೆ ಅತಿಥಿ ಶಿಕ್ಷಕರು 8, 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಪಾಠವನ್ನು ಮಾಡುತ್ತಾರೆಂಬ ಕೆಲಸದ ಹೊರೆ ಹೆಚ್ಚಿದ್ದರೂ ಅತಿಥಿ ಶಿಕ್ಷಕರಿಗೆ ಕಡಿಮೆ ಸಂಬಳ ಏಕೆ; ಯಾವ ಕಾಲಮಿತಿಯೊಳಗೆ ವೇತನ ತಾರತಮ್ಯ ಸರಿ ಪಡಿಸಲಾಗುವುದು? (ಸ್ಪಷ್ಟ ಮಾಹಿತಿ ನೀಡುವುದು). | NSQF ಶಿಕ್ಷಕರ ಗೌರವಧನವನ್ನು ಕೇಂದ್ರ ಸರ್ಕಾರದ ಸಮಗ್ರ ಶಿಕ್ಷಣ ಯೋಜನೆಯಂತೆ ನಿಗದಿಪಡಿಸಲಾಗಿದ್ದು, ಅತಿಥಿ ಶಿಕ್ಷಕರ ಗೌರವಧನವನ್ನು ರಾಜ್ಯ ಸರ್ಕಾರದಿಂದ ನಿಗದಿಪಡಿಸಲಾಗಿರುತ್ತದೆ. |

**ಇಪಿ 29 ಎಂಸಿಡಿ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**